ಒಂದು ಕಾಲೇಜಿನ ಕೆಲ ಹುಡುಗರ ಕೊರಳಿಗೆ ಸುತ್ತಿ ಕಾಲೇಜು ಆರಂಭಕ್ಕೆ ಮುನ್ನವೇ ಏನೇನೋ ಕೂಗ್ತಾ, ಜೈಕಾರ ಹಾಕ್ತಾ ದಾಂಧಲೆ ಎಬ್ಬಸಿದ್ದರು. ಕಾಲೇಜಲ್ಲಿದ್ದ ಹತ್ತೋ ಹದಿನೈದೋ ಮುಸ್ಲಿಂ ಹುಡುಗಿಯರು ಬೆದರಿ ಮನೆಗೆ ಮರಳಿದರು. ಆ ಘಟನೆಯನ್ನು ಸಂತೋಷಪುರದ ಎಸ್ಲೆಂ ಮೇಟಿಯವರು ಅರ್ಧ ದಿನದಲ್ಲಿ ನಿಭಾಯಿಸಿ ಪರಿಸ್ಥಿತಿ ತಿಳಿಗೊಳಿಸಿದರು. ಆದರೆ ಪೋಷಕರು ಊರ ಹೊರಗಿನ ಕಾಲೇಜಿಗೆ ಈ ರೀತಿಯ ಸೂಕ್ಷ್ಮ ವಾತಾವರಣದಲ್ಲಿ ಮಕ್ಕಳಿಗೆ ಕಳಿಸಲು ಹಿಂದೇಟು ಹಾಕಿದರು.

ಜಪ್ಫುಲ್ಲಾ ಮಾತ್ರ 'ನೋಡು ಸಮೀನಾ, ಓದು ಮುಖ್ಯವಾದರೆ ಇದೆಲ್ಲಾ ಲೆಕ್ಕ ಅಲ್ಲ. ಸಾಧಿಸುವುದಾದರೆ ಮುನ್ನುಗ್ಗು, ಸ್ಕೂಲಿನ ರೂಲ್ಸು ನೋಡಿ ನಡಿ, ಇದೊಂದ್ ವರ್ಷ ಅಷ್ಟೇ ಡಿಗ್ರಿ ಕೈಗ್ ಬರುತ್ತೆ. ಹಿಜಾಬ್ ತೆಗೆದಿಟ್ಟೇ ಹೋಗಿ ಬಾ ಮಗಳೇ' ಅಂದಾಗ ಸಮೀನಾ ಹೂವಂತೆ ನಕ್ಕು ಕಾಲೇಜು ದಾರಿ ತುಳಿದಳು. ಅವಳ ಧೈರ್ಯ ನೋಡಿ ಉಳಿದವರೂ ಬಂದರು. ಒಂದೂ ವರ್ಷವೂ ಯಾವ ಸಬ್ಜೆಕ್ಟೂ ಬ್ಯಾಲೆನ್ಸ್ ಉಳಿಸಿಕೊಳ್ಳದೇ ಉನ್ನತ ದರ್ಜೆಯಲ್ಲಿ ಪಾಸಾಗಿದ್ದು ಕಾಲೇಜಿನ ಮಂದಿಗೆಲ್ಲಾ ಖುಷಿ.

ರೇಷ್ಮಾಳಿಗೆ ಈ ಸಂಬಂಧ ಅಡ್ಡಗೋಡೆಯ ಮೇಲೆ ದೀಪ ಇಟ್ಟಂತೆ ಆಗಿತ್ತು. ಹೇಳಿ ಕೇಳಿ ಜಪ್ಫುಲ್ಲಾ ಮತ್ತು ಗಂಡ ಅತ್ತೆ ಮಾವನ ಮಕ್ಕಳು ಬಾಲ್ಯದ ಗೆಳೆಯರು ಅದಕ್ಕಿಂತ ಮೇಲಾಗಿ ಇಬ್ಬರೂ ದೂರ್ವಾಸ ಮುನಿಯ ನೆರೆಹೊರೆಯಂತಹ ಗುಣ ಸ್ವಭಾವ. ಇಬ್ಬರೂ ಅಕ್ಕ ಪಕ್ಕದ ಬೀದಿಯಲ್ಲಿದ್ದರೂ ಹಾಯ್ ಹಲೋ ಹೊರತಾಗಿ ಅಷ್ಟು ಆತ್ಮೀಯತೆ ಇಲ್ಲ. ಇದೀಗ ಸೂರಜ್ ನರ್ಸಿಂಗ್ ಮುಗಿಸುವ ಹೊತ್ತಿಗೆ ಮನೆ ರಜೆಗೆ ಬಂದಾಗ ಐದೂ ಹೊತ್ತು ನಮಾಜಿಗೆ ಹೋಗುವುದು, ಅಂತಿಂಥ ಹುಡುಗರ ಸಹವಾಸ ಇರದೆ, ಅಪ್ಪ ಅಮ್ಮನ ತಮ್ಮ ತಂಗಿಯ ಜೊತೆಯಲ್ಲಿಯೇ ಮನೆವಾಸಿಯಾದ ಸ್ವಭಾವದಿಂದ ಮಗಳನ್ನು ಕೊಡಲು ಮನಸ್ಸು ಮಾಡಿರಬಹುದು ಅಂದುಕೊಂಡಳು.

ಸಮೀನಾ ಒಳ್ಳೆಯ ಹುಡುಗಿ. ಸದಾ ಓದು ಮತ್ತು ಮನೆಗೆಲಸವಷ್ಟೆ. ಪದವಿಯ ಹುಡುಗಿಯಾದರೂ ಈಗಿನ ಕಾಲದ ಹುಡುಗಿಯರಂತೆ ಮೊಬೈಲಿಗೆ ಅಂಟಿಕೊಂಡವಳಲ್ಲ. ಆಗಾಗ ನಮಾಜು, ಕುರಾನು ಪಠಣ. ಇರುವ ಒಬ್ಬ ತಮ್ಮನಿಗೆ ಕಲಿಸುವುದು. ಮಧ್ಯರಾತ್ರಿಯಲ್ಲಿ ಎದ್ದು ಕವಿತೆ ಬರೆಯುವುದು ಹವ್ಯಾಸ. ಹಾಗೆ ನೋಡಿದರೆ ಮನೆಗೆ ತಕ್ಕ ಸೊಸೆಯೆಂದುಕೊಂಡರೂ ಸಂಬಂಧದಲ್ಲಿ ಸರಿಹೋದೀತೇ? ಓದಿದವರಿಗೆಲ್ಲಾ ನೌಕರಿ ದಕ್ಕಿತೇ? ಸೂರಜ್ ದುಡಿಲಿ ದುಡಿದೇ ಇರಲಿ ಮಗಳನ್ನು ಅವನಿಗೆ ಕೊಡಲು ಸಿದ್ಧ ಅಂತ ಬೀದಿಯ ಪಂಕ್ಚರ್ ಬಾಬಾನ ಬಳಿ ಹೇಳಿದ್ದು ರೇಷ್ಮಾ ಕಿವಿಗೂ ಬಿದ್ದಿತ್ತು.

ಆದರೆ ಅಜ್ಜಿ ಎದುರು ಆ ಸುದ್ದಿ ಎತ್ತಬೇಡ ಅನ್ನುವ ಮಾತಿಗೆ ಮನೆಮಂದಿ ಸುಮ್ಮನಾದರೂ ಅವಳು ಡಿಗ್ರಿಯ ನಂತರ ಎಂಎಸ್ಸಿಗೆ ತೋಳಹುಣಸೆ ವಿಶ್ವವಿದ್ಯಾಲಯಕ್ಕೆ ಹೋಗೋ ಆಸೆ ಅಮ್ಮನೆದುರು ತೋಡಿಕೊಂಡಿದ್ದಾಳೆಂದು ಸೂರಜನಿಗೆ ಅಜ್ಜಿ ಹೇಳಿದ್ದರು.

'ನಾ ಡಿಗ್ರಿ ಓದಿ ಅವಳು ಡಬ್ಬಲ್ ಡಿಗ್ರಿ ಮಾಡಿ ಸಂಸಾರದ ಡಿಗ್ರಿ ಏರುಪೇರಾದರೆ? ಬಿಟ್ಟಾಕಜ್ಜಿ' ಅಂದಿದ್ದು ಎಲ್ಲರಿಗೂ ಅಚ್ಚರಿ ಮೂಡಿಸಿತ್ತು.

'ನಾವು ಸಾಕು ಬಿಡಮ್ಮ ಓದಿದ್ದು ಅಂದ್ರೆ ಬಿಡ್ತಾಳಪ್ಪ' ಅಂದ ರೇಷ್ಮಾಳ ಮಾತಿಗೆ ಸೂರಜ್ 'ಅಮ್ಮಾ ಮದುವೆ ಮಾಡಿಕೊಳ್ಳಲೇಬೇಕು ಅಂತ ನೀವು ದೊಡ್ಡವರು ನಿರ್ಧರಿಸಿದ್ರೆ ನಾ ಏನಾ ಹೇಳಲಾರೆ, ಎಂದಾದರೂ ಈ ಎಜುಕೇಷನ್ ಸಂಬಂಧಿಸಿದಂತೆ ಉಚ್ಚಾಯಿಸಿ ಮಾತು ಬಂದ್ರೆ ಕಷ್ಟ, ನೋಡಿ ಮುಂದುವರೆಯಿರಿ' ಅಂತ ಹೇಳಿ ದಾವಣಗೆರೆಯ ಮುಸ್ಲಿಂ ಹಾಸ್ಟೆಲ್ ಕಡೆ ಮುಖ ಮಾಡಿದ್ದ.

ರೇಷ್ಮಾ ಗಂಡನಿಗೆ ಈ ವಿಷಯ ಹೇಳಿ ಮೌನವಾದಳು. ಅವನು ಕೇಳಿಯೂ ಕೇಳದಂತೆ ಸುಮ್ಮನಾದ. ಅದ್ಯಾವ ಮಾಯೆಯಿಂದಲೋ ಈ ಸುದ್ದಿ ಜಪ್ಫುಲ್ಲಾ ಕಿವಿಗೂ ಮುಟ್ಟಿತ್ತು!

'ಭವಿಷ್ಯಕ್ಕಿಂತ ದೊಡ್ಡದು ಯಾವುದೂ ಇಲ್ಲ ಮಗಳೇ, ನೀ ತಿಳಿದಾಕಿ. ಮುಂದೆ ಇವನಿಲ್ಲ ಅಂದ್ರೆ ಯಾರಿಗಾದರೂ ಕೊಟ್ಟು ಮದುವೆಯಂತೂ ಮಾಡಲೇಬೇಕು. ಗಂಡು ಜಾತಿನೇ ಹಂಗೆ ಹೆಣ್ಣು ಗುಲಗಂಜಿಯಷ್ಟು ಮೇಲಿದ್ರೂ ಅಸಹನೆಯಿಂದ ಕುಗ್ಗಿ ಹೋಗ್ತಾನೆ. ಅದರಲ್ಲೂ ಹಣ, ಬಣ್ಣಗಳಿಗಿಂತ, ಆಸ್ತಿ ಅಂತಸ್ತಿಗಿಂತ ವಿದ್ಯೆಯಲ್ಲಿ ಒಂದು ಹೆಜ್ಜೆ ಮುಂದಿದ್ದರೂ ಒಳಗೊಳಗೇ ಕುದ್ದು ಹೋಗ್ತಾನೆ. ನೀ ಸಾಧಿಸುವುದಾದರೆ ನಾನು ಮತ್ತು ನಿನ್ನಮ್ಮ ಸದಾ ಜೊತೆಯಲ್ಲಿ ಇರುತ್ತೇವೆ. ನಮ್ಮೂರಲ್ಲೇ ಪಕ್ಕದ ಬೀದಿಯಲ್ಲೇ, ಕಣ್ಣೆದುರಲ್ಲೇ ಸದಾ ನಮ್ಮ ಕಣ್ಮುಂದೆ ಸುಖವಾಗಿ ಇರೋದಕ್ಕೆ ಮನಸಿದ್ರೆ ಓದು ಸಾಕು ಮಾಡಿ ಸೂರಜನ್ನ ವರಿಸುವುದಾದರೆ ಹೇಗಾದರೂ ಅವರನ್ನು ಒಪ್ಪಿಸುತ್ತೇನೆ'.

'ನೋಡು ನಿನ್ನಿಷ್ಟ ತಿಳಿಸು ಮಗಳೇ, ಇಸ್ಲಾಮಿನಲ್ಲಿ ಗಂಡನಂತೆಯೇ ಸಾಗಬೇಕೆಂದೇ ಇದೆ. ನೀ ಜಾಣೆ ನಿನ್ನ ಓದೇ ಮುಖ್ಯ ಅಂದರೂ ಸರಿ, ಮದುವೆ ಅಂದರೂ ಸರಿ ನಾವು ಅಲ್ಲಾನ ಹೆಸರು ಹಿಡಿದು ನಿನ್ನೊಂದಿಗೆ ಇರುತ್ತೇವೆ' ಅಂದಾಗ ಸಮೀನಾ ಮಂಕಾಗಿದ್ದಳು. ಡಿಗ್ರಿ ಮಾಡಿ ಮುಸುರೆ, ನೆಲ, ಒಲೆ, ಬಟ್ಟೆ, ಗಂಡ ಮಕ್ಕಳೆಂದು ಅದೆಷ್ಟು ಜನರನ್ನು ಅದರಲ್ಲು ತನ್ನ ಸೀನಿಯರ್‌ಗಳ ಮೂರಾಬಟ್ಟೆಯ ಬದುಕನ್ನು ಹತ್ತಿರದಿಂದ ಕಂಡಿದ್ದೇನೆ. ಮುಸಲ್ಮಾನರೆಂದ ಮಾತ್ರಕ್ಕೆ ಹೆಚ್ಚು ಓದಬಾರದಾ? ಹುಡುಗಿಯಾದರೆ ಡಬಲ್ ಡಿಗ್ರಿ ಮುಗಿಸಬಾರದಾ? ಹಿಜಾಬಿನ, ಬುರ್ಖಾದ ಒಳಪದರದಲ್ಲೇ ಕಮರಿ ಹೋಗಬೇಕಾ? ಇಡೀ ರಾತ್ರಿ ಸಮೀನಾ ಚಿಂತಿಸಿದಳು. ನಿದ್ದೆ ಅದೆಷ್ಟೋ ಮೈಲು ದೂರವಿತ್ತು.

ಎದೆಯ ಭಾವದ
ಭ್ರೂಣ
ಉಸಿರಾಡುವ ಮುನ್ನ
ಕರುಳ ಸುತ್ತಿ
ಗಟ್ಟಿತೇ ಉಸಿರು;
ಬೀಸೋ ಹವೆಯ ಸಂಗದ
ಸುಮವರಳುವ ಮುನ್ನ ಮೊಗ್ಗಿಗೇ ಕೀಟ
ಕೊರೆದಳಿಯಿತೇ?
ಎದೆಯ ನೂರು ಮಾತು
ತುಟಿಗೆ ಹಾಯುವ ಮೊದಲೇ
ಕಾರ್ಕೋಟಕ ತೊಟ್ಟಿಕ್ಕಿತೇ ಬಾಯೊಳಗೆ..


ತನ್ನದೇ ಪದ್ಯ ಹತ್ತು ಹಲವು ಬಾರಿ ಹೇಳಿಕೊಂಡಳು ಸಮೀನಾ.

ಮದುವೆ, ಪದವಿ, ಅಪ್ಪ ಸೂರಜ್, ಸಂಸಾರ... ವ್ಯೂಹದಂತೆ ಅಲ್ಲಲ್ಲಿ ಚಕ್ರಾಕಾರವಾಗಿ ಸುತ್ತತೊಡಗಿದ್ದರು. ಅಭಿಮನ್ಯು ತಾನಾಗಿ ಅವರನ್ನು ಎದುರಿಸಲಿ ಹೇಗೆ? ಶಿಕ್ಷಣಕ್ಕೋ, ಸಂಸಾರಕ್ಕೋ ಜಿಗಿಯಲಿ ಹೇಗೆ? ಅನ್ನುವ ಗೊಂದಲ ಅವಳ ತಲೆಯಲಿ ಸುದರ್ಶನ ಚಕ್ರವಾಗಿತ್ತು!

ನಾಳೆ ಅಂತಿಮ ವರ್ಷದ ಫಲಿತಾಂಶ. ಬದುಕಿನ ಪರೀಕ್ಷೆ ಸದಾ ಜಾರಿಯಿದೆ. ಸಮೀನಾಗೆ ಅದ್ಯಾವಾಗ ಕಣ್ಣು ಹತ್ತಿತೋ ತಿಳಿಯಲಿಲ್ಲ! ಫಲಿತಾಂಶ ಬಂತು. ಇಡೀ ಕಾಲೇಜಿಗೆ ಅತಿ ಹೆಚ್ಚು ಅಂಕದೊಂದಿಗೆ ಪಾಸಾಗುವುದರ ಜೊತೆಯಲ್ಲಿ ದಾವಣಗೆರೆ ಯುನಿವರ್ಸಿಟಿಯಲ್ಲೇ ಸೆಕೆಂಡ್ ಟಾಪರ್ ಆಗಿ ಹೊರಹೊಮ್ಮಿದ್ದಳು. ಮನೆಯಲ್ಲಿ ಸಂಭ್ರಮವೇನೋ ಹೆಚ್ಚಿತ್ತು. ಆದರೆ ಸಮೀನಾಳಿಗೆ ಕೌಟುಂಬಿಕ ಚಕ್ರವ್ಯೂಹ ಭೇದಿಸುವ ದಿಕ್ಕು ಕಾಣುತ್ತಿರಲಿಲ್ಲ. ಹೈಸ್ಕೂಲಲ್ಲಿದ್ದಾಗ ಅವರ ಕನ್ನಡ ಮೇಷ್ಟ್ರು ಸದಾ ಹೇಳುತ್ತಿದ್ದ ಮಾತು 'ಆಕಾಶಕ್ಕೆ ಗುರಿ ಇಡಿ, ಆರ್.ಸಿ.ಸಿಗಾದರೂ ಕಲ್ಲು ಬೀಳುತ್ತೆ; ಆರ್.ಸಿ.ಸಿಗೇ ಗುರಿಯಿಟ್ಟರೆ ಕಲ್ಲು ನಿಮ್ ತಲೆ ಮೇಲೇ ಬೀಳುತ್ತೆ' ಅಂತ.

ಸಮೀನಾ ಆ ಮಾತಿನಿಂದಲೇ ದೊಡ್ಡ ಗುರಿ ಎದೆಯಲ್ಲಿ ಕೆತ್ತಿಕೊಂಡಿದ್ದಳು– ಎಂಎಸ್ಸಿ ಮಾಡಿ ನೆಟ್, ಸ್ಲೆಟ್ ಬರೆದು ಯುನಿವರ್ಸಿಟಿಯಲ್ಲಿ ಪ್ರಾಧ್ಯಾಪಕಿಯಾಗುವುದು ಅಂತ. ಅಪ್ಪನ ಮಾತು ಮದುವೆ, ಅಮ್ಮನ ಆಸೆ ಓದು, ನಿನ್ನಿಷ್ಟ ಅನ್ನುವ ತಮ್ಮ, ಸಮೀನಾ ತಲೆ ಗಿರ ಗಿರ ಅಂತಿತ್ತು. ಫಲಿತಾಂಶದ ಮರುದಿನ ಗೆಳತಿಯೊಂದಿಗೆ ಸೀದಾ ತೋಳಹುಣಸೆ ವಿಶ್ವ ವಿದ್ಯಾಲಯಕ್ಕೆ ಹೋಗಿ ಅರ್ಜಿ ಸಮೇತ ಪ್ರಾಸ್ಪೆಕ್ಟಾಸ್ ತಂದು ಅಮ್ಮನ ಕೈಲಿಟ್ಟು ರೂಮು ಸೇರಿದಳು. ಗುಲ್ಜಾರ್ ಅದನ್ನು ಗಂಡನ ಎದುರಿತ್ತಳು. ಜಪ್ಫುಲ್ಲಾ ಅದನ್ನೇ ನೋಡಿದ. ದೊಡ್ಡ ನಿಟ್ಟುಸಿರಿಟ್ಟು ಸುಮ್ಮನಾದ.

ಸಮೀನಾ ಹೊಸ ಪದ್ಯ ಬರೆಯಲು ಹೊಸ ಪದಗಳ ಹುಡುಕುತ್ತಿದ್ದಳು! ಅದೆಂತದೋ ಬೆಳಕು ಮನೆ ತುಂಬಾ ತುಂಬಿಕೊಂಡಿತ್ತು!



ಪ್ರತಿಕ್ರಿಯಿಸಿ: feedback@sudha.co.in